# ಪುಸ್ತಕ ಪರಿಚಯ

## ಮೌಲ್ಯ ಶಿಕ್ಷಣ

**ಲೇಖಕರು:** ಟಿ. ಜಯರಾಮು

**ಪ್ರಕಾಶಕರು:** ಮಂದಾರ ಪ್ರಕಾಶನ, ನಂ.201, ಜೆ. 1ಬಿ, ರಾಷ್ಟ್ರೀಯ ಕ್ರೀಡಾಗ್ರಾಮ, ಕೋರಮಂಗಲ, ಬೆಂಗಳೂರು-47. ದೂರವಾಣಿ: 080-25710959

**ಪುಟಗಳು:** xxiii + 234; Demi 1/8

**ಬೆಲೆ:** ರೂ. 120/-

**ಪ್ರಥಮ ಮುದ್ರಣ:** 2003, **ಪರಿಷ್ಕೃತ ಮುದ್ರಣ:** 2004

ಈ ಪುಸ್ತಕಕ್ಕೆ ಪ್ರಸಿದ್ಧ ಬರಹಗಾರರೂ ಸಾಹಿತಿಗಳೂ ಆದ ಡಾ. ದೊಡ್ಡರಂಗೇಗೌಡ ಮತ್ತು ಪ್ರೊ. ಬರಗೂರು ರಾಮಚಂದ್ರಪ್ಪನವರ ಮುನ್ನುಡಿ-ಬೆನ್ನುಡಿಗಳು ಸೇರಿವೆ. ಮೌಲ್ಯಗಳ ಬಗ್ಗೆ ಹೆಚ್ಚು ಚಿಂತನೆಯನ್ನೇ ಮಾಡದ, ಮುಂದೆ ಶಿಕ್ಷಕ ವೃತ್ತಿಯನ್ನು ಜೀವನವೃತ್ತಿ ಮಾಡಿಕೊಳ್ಳುವ ಹಂಬಲವಿರುವ ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ಇದೊಂದು ಪಠ್ಯಪುಸ್ತಕವಾದರೆ ಟಿ. ಜಯರಾಮುರವರ ಶ್ರಮವು ಸಾರ್ಥಕವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ವಿದ್ಯಾರ್ಥಿಗಳಿಗೊಂದು ಕಿವಿಮಾತು: ಇದೊಂದನ್ನೇ ಸಮಗ್ರ ಮೌಲ್ಯಶಿಕ್ಷಣ ಪಠ್ಯಪುಸ್ತಕವೆಂಬ ಭ್ರಮೆಗೆ ಬೀಳಬೇಡಿ. ಇದಕ್ಕೆ ಪೂರಕವಾದ, ತರಗತಿಯ ಪಠ್ಯಕ್ರಮಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಜೊತೆಜೊತೆಯಾಗಿ ಅಭ್ಯಾಸ ಮಾಡಿ. ಆಗ ಇದರ ಫಲ ನೂರ್ಮಡಿಗೊಳ್ಳುತ್ತದೆ. ಗ್ರಂಥಕರ್ತರ ಶ್ರಮದ ಫಲ ನಿಮಗೆ ದೊರೆಯಯುತ್ತದೆ.

ಈ ಪುಸ್ತಕವು ಉಪಾಧ್ಯಾಯರಿಗೆ ಮಾರ್ಗದರ್ಶಿಯಾಗಲಿದೆ. ಉಪಾಧ್ಯಾಯರುಗಳು ತಮ್ಮ ತಮ್ಮ ಸ್ವಾನುಭವಗಳನ್ನು ಜಯರಾಮುರವರ ಅನುಭವಕ್ಕೆ ಮೇಳವಿಸಿದರೆ ಅವರಿಗೂ ಉಪಯೋಗವಾಗುವುದರೊಂದಿಗೆ ಅವರ ವಿದ್ಯಾರ್ಥಿಗಳಿಗೂ ವರ್ಗಾವಣೆಯಾಗುವುದರಲ್ಲಿ ಸಂದೇಹವಿಲ್ಲ. ಈ ಪುಸ್ತಕದಲ್ಲಿರುವ ಮೌಲ್ಯಾಂಶಗಳು ಎಲ್ಲರ ಕೃತಿಗಳಲ್ಲಿ ಪ್ರತಿಫಲಿಸಿದರೆ, ಇಂದಿನ ಎಲ್ಲಾ ಕ್ಷೇತ್ರಗಳ ದುಃಸ್ಥಿತಿಗಳೂ ಕ್ರಮೇಣ ಮಾಯವಾಗಲು ಸಹಾಯಕವಾಗಬಹುದು.

ಈ ಪುಸ್ತಕದಲ್ಲಿ ಒಟ್ಟು ಹದಿನಾಲ್ಕು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ. ಪ್ರತಿಯೊಂದು ಅಧ್ಯಾಯದ ಕೊನೆಗೂ ಒಂದೊಂದು ಕೊಂಡಿಯಿದ್ದು ಅದು ಮುಂದಿನ ಅಧ್ಯಾಯವನ್ನು ಸೇರಿಕೊಳ್ಳುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇದೇ ಅಭಿಪ್ರಾಯವು ಹಿರಿಯ ಸಾಹಿತಿಗಳಿಂದಲೂ ಅಭಿವ್ಯಕ್ತವಾಗಿದೆ. ಕ್ರಿಯಾಶೀಲ ಹಾಗೂ ಕಾರ್ಯತತ್ಪರ ಓದುಗರಿಗೆ, ಶಿಕ್ಷಕರಿಗೆ ಮೌಲ್ಯದ ಅರ್ಥ ಹಾಗೂ ಪರಿಕಲ್ಪನೆಯೊಂದಿಗೆ ಮೌಲಿಕ ಪ್ರಚೋದನೆಯನ್ನೂ ನೀಡುತ್ತದೆ. ಆಧುನಿಕ ವೈಜ್ಞಾನಿಕ ಹಾಗೂ ತಾಂತ್ರಿಕ ಯುಗದಲ್ಲಿ ಲಂಗುಲಗಾಮಿಲ್ಲದೆ ನಾಗಾಲೋಟದಲ್ಲಿ ಓಡುತ್ತಿರುವ ಮಾನವನು ಮೌಲ್ಯಜೀವನದಲ್ಲಿ ಮುಗ್ಗರಿಸಿದ್ದಾನೆ. ಯಾರೊಬ್ಬರೂ ಕರ್ತವ್ಯನಿರ್ವಹಣೆ ಮಾಡದೆ ಇರುವ ಸಂದರ್ಭದಲ್ಲಿ ಮೌಲ್ಯವರ್ಧನೆಯ ಉದ್ದೇಶಗಳು ಎಂಬ ಅಧ್ಯಾಯದಲ್ಲಿ ಪ್ರತಿಯೊಬ್ಬರ ಕರ್ತವ್ಯದ ಬಗ್ಗೆ ಸೂಚ್ಯವಾಗಿ ತಿಳಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರೈಕ್ಯತೆ, ಭಾವೈಕ್ಯತೆ ಹಾಗೂ ಸಮಾನತೆಗಳನ್ನು ಬೆಳೆಸುವುದು, ನೈಸರ್ಗಿಕ ಮತ್ತು ಪರಿಸರ ಸಂಪನ್ಮೂಲಗಳನ್ನು ಸಂರಕ್ಷಿಸುವುದು, ಪ್ರಜಾತಂತ್ರದ ನೈಜ ಅರ್ಥವನ್ನು ತಿಳಿದು ಅದರಂತೆ ನಡೆಯುವುದು, ಸಮಯದ ಸದುಪಯೋಗವನ್ನು ಮಾಡಿಕೊಳ್ಳುವುದು, ಸಾಮಾಜಿಕ ಮೌಲ್ಯಗಳನ್ನು ಗುರುತಿಸಿ, ಪೋಷಿಸಿ ಅಭಿವೃದ್ಧಿಗೊಳಿಸುವುದು, ಪ್ರತಿ ವ್ಯಕ್ತಿಯಲ್ಲಿಯೂ, ಪ್ರತಿ ಕುಟುಂಬದಲ್ಲಿಯೂ, ಪ್ರತಿ ಸಮುದಾಯದಲ್ಲಿಯೂ, ಪ್ರತಿ ಸಮಾಜದಲ್ಲಿಯೂ, ಪ್ರತಿ ರಾಜ್ಯ ಹಾಗೂ ದೇಶದಲ್ಲಿಯೂ ಸುಪ್ತವಾಗಿರುವ ಸಾರ್ವಕಾಲಿಕ ಹಾಗೂ ಸಾರ್ವಜನಿಕ ಸದ್ವಿಚಾರಗಳ, ಸತ್‌ಸಂಪ್ರದಾಯಗಳ, ಆಚಾರ-ವಿಚಾರಗಳ ಪಾಲನೆಯ ಮೂಲಕ ಸುಖೀ ಕುಟುಂಬದ ನೈಜ ಅರ್ಥವನ್ನು ಗ್ರಹಿಸುವುದು ಹಾಗೂ ಅದರ ಮಹತ್ವವನ್ನು ಅರಿಯುವುದು ಮತ್ತು ಆ ಅರಿವಿನಿಂದ ಜೀವನಕ್ಕೊಂದು ಉದಾತ್ತ ಗುರಿಯನ್ನು ಪ್ರತಿಯೊಬ್ಬರೂ ರೂಪಿಸಿಕೊಂಡು ಅದನ್ನು ಪಾಲಿಸುವುದು ಮೌಲ್ಯಶಿಕ್ಷಣದ ಪ್ರಮುಖ ಉದ್ದೇಶಗಳಾಗಿವೆ. ಇವುಗಳನ್ನು ಸುಲಭವಾಗಿ ತಿಳಿಯಲು ಅನೇಕ ದೃಷ್ಟಾಂತಗಳನ್ನು ಈ ಪುಸ್ತಕದಲ್ಲಿ ಕಾಣಬಹುದು.

ಉಳಿದ ಅಧ್ಯಾಯಗಳಲ್ಲಿರುವ ಮುಖ್ಯ ವಿಚಾರಗಳು ಇಂತಿವೆ: ನಿರಂತರ ಪ್ರಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವ ಶಿಕ್ಷಣವ್ಯವಸ್ಥೆಯು ಕೆಲವು ಕಡೆ ಸರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಸಹ ಇಡೀ ಸಮಾಜದ ಮೇಲೆ ಗಂಭೀರವಾದ ಪರಿಣಾಮವನ್ನು ಬೀರಲು ಅದಕ್ಕೆ ಸಾಧ್ಯವಾಗಿಲ್ಲ. ಅನುಪಯುಕ್ತ ಹಾಗೂ ಹಾನಿಕಾರಕ ಪದಾರ್ಥಗಳ ಬಳಕೆಯಿಂದಾಗಿ ಅಸ್ವಸ್ಥತೆ ಎದ್ದು ಕಾಣುತ್ತಿದೆ.

ಶಿಕ್ಷಣ ಕ್ಷೇತ್ರದ ಸ್ವಾಸ್ಥ್ಯಕ್ಕೆ ಮೌಲ್ಯಗಳ ಆವಶ್ಯಕವಿದೆ. ಮೌಲ್ಯಗಳ ಸ್ವರೂಪ, ಪ್ರಾಮುಖ್ಯತೆ ಅಥವಾ ಮಹತ್ವಗಳನ್ನು ಅರಿಯದೇ ವ್ಯಕ್ತಿಗಳಲ್ಲಿ ಮೌಲ್ಯ ಸ್ಥಾಪಿಸಲು ಸಾಧ್ಯವಿಲ್ಲ. ಪ್ರಾಥಮಿಕ ಹಂತ ದಲ್ಲಿಯೇ ಮೌಲ್ಯಗಳ ಬೀಜಾಂಕುರವಾಗಿ ಅದು ಬಹುಶಾಖಾ ಯುಕ್ತವಾಗಿ ನಂತರ ಕಾಲದಲ್ಲಿ ಹೆಮ್ಮರವಾಗಿ ಬೆಳೆಯ ಬೇಕಾಗಿದೆ. ಇದರಿಂದ ನಿಜವಾದ ಅರ್ಥದಲ್ಲಿ ಅಕ್ಷರಸ್ಥ, ಸೃಜನಶೀಲ, ವಿವೇಚನಾಶೀಲ, ವಿವೇಕಯುಕ್ತ, ಪರಿಣಾಮ ಕಾರಿ, ಸತ್ಪ್ರಜೆಯ ಸೃಷ್ಟಿ ಸಾಧ್ಯ.

ಅತ್ಯಲ್ಪ ಕಾಲದಲ್ಲಿ ಅಧಿಕ ಸಂಪತ್ತನ್ನು ಗಳಿಸಿ, ಭೋಗ ಸಾಮ್ರಾಜ್ಯದ ಒಡೆಯರಾಗಿ, ಅಧಿಕಾರ–ಅಂತಸ್ತುಗಳನ್ನು ಗಳಿಸಿ ಮೆರೆಯಬೇಕೆನ್ನುವ ಪ್ರವೃತ್ತಿಗೆ ಕಡಿವಾಣವನ್ನು ಹಾಕಲು ಸಕಾಲಿಕ ಸಮಕಾಲಿಕ ಮೌಲ್ಯಗಳು ಅತ್ಯಗತ್ಯವಾಗಿರುತ್ತವೆ. ದೌರ್ಬಲ್ಯ ಹಾಗೂ ನ್ಯೂನತೆಗಳು ವ್ಯಕ್ತಿಯ ಸಮತೆಯನ್ನು ನಾಶಗೊಳಿಸುತ್ತವೆ. ವೈಯಕ್ತಿಕ ಮೌಲ್ಯಗಳು, ನೆರೆಹೊರೆಯ ಮೌಲ್ಯಗಳು ಹಾಗೂ ಸಮುದಾಯ ಸಂಬಂಧಿತ ಮೌಲ್ಯಗಳ ಬಗ್ಗೆ ಶಿಕ್ಷಕರಿಗೆ ಸರಿಯಾದ ಮಾಹಿತಿ ಇರಬೇಕು. ಈ ಮೌಲ್ಯಗಳಿಗೆ ಪರಸ್ಪರ ಸಂಬಂಧವಿದೆ. ಈ ಮೌಲ್ಯಗಳು ವ್ಯಕ್ತಿ ಹಾಗೂ ಸಮಾಜದ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತವೆ. ಈ ಎಲ್ಲಾ ಮೌಲ್ಯಗಳು ಶಿಕ್ಷಕರಲ್ಲಿ ಅಂತರ್ಗತ ವಾಗಬೇಕು.

ಮಗುವಿನ ಜನನಾವಸ್ಥೆಯಿಂದ ವ್ಯಕ್ತಿಯ ಮರಣಾವಸ್ಥೆ ಯವರೆಗೆ ದೈಹಿಕ ಹಾಗೂ ಮಾನಸಿಕ ಸ್ಥಿತಿ–ಗತಿಗಳಲ್ಲಾಗುವ ಏರು–ಪೇರುಗಳಿಂದ ನಾನಾ ಪ್ರಕಾರವಾದ ಪರಿಣಾಮಗಳನ್ನು ವ್ಯಕ್ತಿಯ ಜೀವನದಲ್ಲಿ ಯಾರಾದರೂ ಗುರುತಿಸಬಹುದಾಗಿದೆ. ಇವುಗಳನ್ನು ಕೂಲಂಕಷವಾಗಿ ತಿಳಿಯುವ ಶ್ರಮವನ್ನು ಅಧ್ಯಾಪಕರು ನಿರ್ವಹಿಸಬೇಕಾಗಿದೆ. ಪರಿಸರದ ಪ್ರಭಾವ ದಿಂದಾಗಿ ಬಹಳ ಮುಖ್ಯವಾಗಿ ಮಕ್ಕಳಲ್ಲಿ ಸಮುಚಿತ ಹಾಗೂ ಅಸಮುಚಿತ ಮೌಲ್ಯಗಳ ಅಂಕುರಾರ್ಪಣೆಯಾಗುತ್ತದೆ. ಸೂಕ್ತ ಕಾಲಗಳಲ್ಲಿ ಸೂಕ್ತ ಗಮನವನ್ನು ಹರಿಸದಿದ್ದಲ್ಲಿ ಅಸಮುಚಿತ ಮೌಲ್ಯಗಳು ಮಾತ್ರ ಬೀಜವೊಡೆದು, ಗಿಡವಾಗಿ, ಮರವಾಗಿ, ಹೆಮ್ಮರವಾಗಿಬಿಡುತ್ತವೆ. ಇದು ವ್ಯಕ್ತಿಯ ಚಾರಿತ್ರ್ಯವನ್ನು ಸಂಪೂರ್ಣವಾಗಿ ಹಾಳುಗೆಡವುತ್ತದೆ. ಇದನ್ನು ನಿರೋಧಿಸು ವುದು ವ್ಯಕ್ತಿಯ ಇಚ್ಛಾಶಕ್ತಿಯನ್ನು ಅವಲಂಬಿಸಿರುತ್ತದೆ. ಆದುದರಿಂದ ಸಮಸ್ಯಾತ್ಮಕ ಗುಣ–ಸ್ವಭಾವಗಳನ್ನು ಪ್ರಾರಂಭ ದಲ್ಲಿಯೇ ಗುರುತಿಸಿ, ಅವುಗಳನ್ನು ಸಂಪೂರ್ಣವಾಗಿ ಚಿವುಟಿ ಹಾಕುವ ಕೆಲಸವು ಅಧ್ಯಾಪಕವೃಂದ ಹಾಗೂ ಪೋಷಕರಿಂದ ಆಗಬೇಕಾಗಿದೆ. ನಂತರ ವಿದ್ಯಾರ್ಥಿಗಳು ಸನ್ಮಾರ್ಗಗಾಮಿ ಮೌಲ್ಯಗಳನ್ನು ಸ್ವೀಕರಿಸುವಂತಹ ಪರಿಸರವನ್ನು ಸೃಷ್ಟಿಸಿ, ಅವುಗಳ ಪಾಲನೆ ಪೋಷಣೆಯಲ್ಲಿ ಶಿಕ್ಷಕರು ಕಾರ್ಯಪ್ರವೃತ್ತರಾಗಬೇಕು.

ಶಿಕ್ಷಣ ಪ್ರಕ್ರಿಯೆಗೆ ನೀಡಿರುವ ಕೃಷಿಪ್ರಕ್ರಿಯೆಯ ಉಪಮೆಯು ಬಹು ಅರ್ಥಪೂರ್ಣವಾಗಿದೆ. ರೈತನೊಬ್ಬ ಉತ್ತಮ ರೈತನಾಗಲು ಹಗಲಿರುಳೂ ದುಡಿಯುತ್ತಾನೆ. ಸ್ವಂತ ಇಚ್ಛೆಯಿಂದ ರೈತನು ಕರ್ಮಜೀವಿಯಾಗಿದ್ದಾನೆ. ಇದ ರಂತೆಯೇ ಉಪಾಧ್ಯಾಯನೂ ಇರಬೇಕು. ಆದರೆ ಈಗ ಆಗಿರುವುದೇನು? ಸ್ವಂತ ಇಚ್ಛೆಯಿಂದ ಉಪಾಧ್ಯಾಯರಾಗು ವವರು ಬಹಳ ವಿರಳವಾಗುತ್ತಿದ್ದಾರೆ. ಅನಿವಾರ್ಯತೆ ಯಿಂದಾಗಿ ಶಿಕ್ಷಕವೃತ್ತಿಯನ್ನು ಆರಂಭಿಸಿ, ಅದರಲ್ಲಿ ಕಿಂಚಿತ್ತೂ ಆಸಕ್ತಿ ತೋರಿಸದವರೂ ಇದ್ದಾರೆ. ಇದೇ ನಮ್ಮ ದುರ್ದೈವ ವಾಗಿದೆ. ಇದಕ್ಕೆ ಪೂರಕವಾಗಿ ಶಿಕ್ಷಣವು ವ್ಯಾಪಾರದ ವಸ್ತು ವಾಗಿರುವುದು ಬಹಳ ಶೋಚನೀಯ ವಿಷಯವಾಗಿದೆ. ಎಲ್ಲಿಯವರೆಗೆ ಉಪಾಧ್ಯಾಯನು ತನ್ನ ಸ್ಥಾನ–ಮಾನಗಳನ್ನು ಅರಿಯುವುದಿಲ್ಲವೋ, ತನ್ನ ಕರ್ತವ್ಯಪರಿಪಾಲನೆಯನ್ನು ಮಾಡುವುದಿಲ್ಲವೋ, ಅವನು ವಿದ್ಯಾರ್ಥಿಗಳ ಹಿತಕ್ಕಾಗಿ ಶ್ರಮಜೀವಿಯಾಗುವುದಿಲ್ಲವೋ—ಅಲ್ಲಿಯವರೆಗೆ ಆ ಮೌಲ್ಯ ಗಳು ವಿದ್ಯಾರ್ಥಿಗಳ ಅಂತರಂಗಕ್ಕೆ ತಲುಪುವುದಿಲ್ಲ. ರೈತರನ್ನು ನೋಡಿಯಾದರೂ ಉಪಾಧ್ಯಾಯರು ತಮ್ಮ ಹೊಣೆಗಾರಿಕೆ ಯನ್ನರಿತರೆ ಈ ಗ್ರಂಥ ಸಾರ್ಥಕ ಎಂದು ಲೇಖಕರ ಅನಿಸಿಕೆ.

ಪಂಚಮಹಾಮೌಲ್ಯಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮ ಹಾಗೂ ಅಹಿಂಸೆಯನ್ನು ಎಲ್ಲರೂ ಸದಾ ಕಾಲ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಇತರ ಎಲ್ಲಾ ಮೌಲ್ಯಗಳು ಈ ಪಂಚಮೌಲ್ಯಗಳಿಗೆ ಸಂಬಂಧಿಸಿದ್ದೇ ಆಗಿವೆ. ಈ ಮೌಲ್ಯಗಳನ್ನೇ ಪ್ರಪಂಚದ ಎಲ್ಲಾ ಧರ್ಮಗಳೂ ಎತ್ತಿಹಿಡಿದಿವೆ. ಇದಕ್ಕೆ ಪೂರಕ ವಾದ ಧರ್ಮಗ್ರಂಥಗಳ ಹೇಳಿಕೆಗಳ ಉದ್ಧರಣ ಮನನೀಯ ವಾಗಿದೆ.

ಶಾಲೆಗಳಲ್ಲಿ ಮೌಲ್ಯವರ್ಧನಾ ಕಾರ್ಯಕ್ರಮಗಳಿಗೆ ಒತ್ತು ನೀಡಬೇಕಾಗಿದೆ. ಇದಕ್ಕಾಗಿ ಪ್ರಾಸಂಗಿಕ ಅಥವಾ ಪರೋಕ್ಷ ವಿಧಾನ, ಪ್ರತ್ಯಕ್ಷ ವಿಧಾನ ಹಾಗೂ ಸಮಗ್ರ ವಿಧಾನಗಳ ಬಗ್ಗೆ ಶಿಕ್ಷಕರಿಗೆ ಬೇಕಾದ ಮಾಹಿತಿ ಇಲ್ಲಿದೆ. ಸಮಗ್ರ ವಿಧಾನಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಪ್ರಸ್ತಾವನೆಯೂ ಇಲ್ಲಿದೆ. ಶಾಲಾಪಠ್ಯಬೋಧನೆಯ ವಿಷಯಗಳಿಗೆ ಸಂಬಂಧಿಸಿದ ಮೌಲ್ಯವರ್ಧನೆಯ ವಿಧಿ–ವಿಧಾನಗಳನ್ನು ಇಲ್ಲಿ ನೀಡಲಾಗಿದೆ. ಉಪಪಠ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸುಮಾರು ೪೩ ಚಟುವಟಿಕೆಗಳನ್ನು ಇಲ್ಲಿ ವಿವರಿಸಲಾಗಿದೆ.

ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಸೂಕ್ತ ಸಲಹೆ ಗಳು ಅತ್ಯಂತ ಅಗತ್ಯ. ಆದುದರಿಂದ ಅಧ್ಯಾಪಕವೃಂದದಲ್ಲಿ ಪ್ರತಿಯೊಬ್ಬರೂ ಸಹ ಸರಿಯಾದ ತರಬೇತಿ ಪಡೆದು ಅತ್ಯುತ್ತಮ ಮಾರ್ಗದರ್ಶಕ ಹಾಗೂ ಸಲಹೆಗಾರರಾದಲ್ಲಿ,

ಇಂದು ಶಿಕ್ಷಣ ಕ್ಷೇತ್ರದಲ್ಲಿ ಕಂಡುಬರುತ್ತಿರುವ ಅನೇಕ ಸಮಸ್ಯೆಗಳು ಬಗೆಹರಿದು ನಿಜವಾದ ಅರ್ಥದಲ್ಲಿ ಪಾಠ ಪ್ರವಚನಗಳು ಜರುಗುತ್ತವೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಇದರ ಪಾಲನೆಗಾಗಿ ಶಾಲೆಗಳಲ್ಲಿ ಅಗತ್ಯವಾದ ಸಮಿತಿಗಳನ್ನು ಸ್ಥಾಪಿಸಿ, ಅವು ನಿರ್ದುಷ್ಟವಾಗಿ ಹಾಗೂ ಸ್ವಾರ್ಥರಹಿತವಾಗಿ ನಡೆಯುವಂತೆ ಮಾಡುವ ಅಗತ್ಯವಿದೆ. ಆಗ ಗುರು–ಶಿಷ್ಯರ ಸಂಬಂಧ ನೈಜ ಅರ್ಥದಲ್ಲಿ ಪ್ರಯೋಗಕ್ಕೆ ಬಂದಂತೆ ಆಗುತ್ತದೆ.

ಮೌಲ್ಯಗಳ ವಿಚಾರವನ್ನು ಅನೇಕ ರೀತಿಗಳಲ್ಲಿ ತಿಳಿಸಿಕೊಟ್ಟನಂತರ ಕೆಲವು ಪ್ರಮುಖ ಮೌಲ್ಯಗಳ ವೈಚಾರಿಕ ವಿವರಣೆಯನ್ನು ನೀಡಲಾಗಿದೆ. ಇದು ಚಿಂತನಾಶೀಲ ಅಧ್ಯಾಪಕವೃಂದಕ್ಕೆ ಮಾನಸಿಕ ಅಗತ್ಯತೆಯನ್ನು ಪೂರೈಸುತ್ತದೆ.

ಒಟ್ಟಿನಲ್ಲಿ ಈ ಪುಸ್ತಕವು ಶಿಕ್ಷಣಕ್ಷೇತ್ರವನ್ನು ಸುಧಾರಿಸುವ ಒಂದು ಸಾಧನವಾಗಬಲ್ಲದು. ಅನೇಕ ವಿಚಾರಧಾರೆಗಳು ಇಲ್ಲಿ ಒಡಗೂಡಿದ್ದರೂ ಮುದ್ರಣದಲ್ಲಿ ಹಲವಾರು ಭಾಷಾ ದೋಷಗಳು ಉಳಿದುಕೊಂಡಿವೆ. ಇದು ಪರಿಷ್ಕೃತ ಮುದ್ರಣವೆಂದೂ ಬರೆಯಲಾಗಿದೆ! ಮುಂದಿನ ಮುದ್ರಣಗಳಲ್ಲಿ ಇವುಗಳನ್ನು ತಿದ್ದುವುದು ಉತ್ತಮ. ಮುಖಪುಟದ ವಿನ್ಯಾಸವು ಮೌಲ್ಯಗಳ ಪಾತ್ರವನ್ನು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿದೆ. ಪುಸ್ತಕದ ಬೆಲೆಯೂ ಕಡಮೆಯಾದ್ದರಿಂದ ಗ್ರಾಮಾಂತರ ಪ್ರದೇಶದ ಶಿಕ್ಷಕರೂ ಇದನ್ನು ಬಳಸಿದರೆ ಉತ್ತಮ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ.

—ಸಿ. ಗುರುಮೂರ್ತಿ, RIMSE, ಮೈಸೂರು

## ಪ್ರಹಸನ ಪ್ರಸಂಗ

**ಕಳ್ಳತನದ ಆಪಾದನೆಗೆ ಗುರಿಯಾಗಿದ್ದ ಕಕ್ಷಿದಾರನ ಪರವಾಗಿ** ವಾದಮಾಡುತ್ತಿದ್ದ ಲಾಯರು ಬುದ್ಧಿಯನ್ನು ಉಪಯೋಗಿಸಿ ಹೇಳಿದ, “ಈತ ಕೇವಲ ತನ್ನ ಕೈಯನ್ನು ಕಿಟಕಿಯ ಮೂಲಕ ಒಳಗೆ ಹಾಕಿ ಕೆಲವು ವಸ್ತುಗಳನ್ನು ಅಪಹರಿಸಿದ. ಕೈ ಸಂಪೂರ್ಣ ವ್ಯಕ್ತಿಯಾಗಿರಲು ಸಾಧ್ಯವಿಲ್ಲ. ಆದ್ದರಿಂದ ಈತನ ಕೈ ಮಾಡಿದ ತಪ್ಪಿಗೆ ಈತನನ್ನೇ ಶಿಕ್ಷಿಸುವುದು ನ್ಯಾಯಸಮ್ಮತವಲ್ಲ.”

ನ್ಯಾಯಾಧೀಶರು ಆಲೋಚಿಸಿ, “ಬಹಳ ಚೆನ್ನಾಗಿ ಹೇಳಿದಿರಿ. ನಿಮ್ಮ ವಾದವನ್ನೇ ಬಳಸಿಕೊಂಡು ನಾನು ಈತನ ಕೈಗೆ ಒಂದು ವರ್ಷದ ಸೆರೆವಾಸವನ್ನು ವಿಧಿಸಿದ್ದೇನೆ. ಈತ ಅದರೊಂದಿಗೆ ಇರಬಹುದು ಅಥವಾ ಇಲ್ಲದೇ ಇರಬಹುದು. ಅದು ಅವನಿಗೆ ಬಿಟ್ಟದ್ದು” ಎಂದರು ನಗುತ್ತ.

ತೀರ್ಪನ್ನು ಕೇಳಿ ಕಳ್ಳನೂ ನಗುತ್ತ, ಲಾಯರ ಸಹಾಯದಿಂದ ತನ್ನ ಕೃತಕ ಕೈಯನ್ನು ಮುಂದಿನ ಟೇಬಲಿನ ಮೇಲೆ ಬಿಚ್ಚಿಟ್ಟು ಕೋರ್ಟಿನಿಂದ ಹೊರ ನಡೆದ!

* * *

ವಿಜ್ಞಾನಿಗಳ ಗುಂಪೊಂದು ಚರ್ಚೆಯಲ್ಲಿ ತೊಡಗಿತ್ತು. ದೇವರ ಬಳಿಗೆ ಹೋಗಿ ಅವನ ಆವಶ್ಯಕತೆ ಇಲ್ಲವೆಂದು ತಮ್ಮಲ್ಲೊಬ್ಬ ವಿಜ್ಞಾನಿ ಹೇಳಿ ಬರಬೇಕು ಎಂದು ತೀರ್ಮಾನಿಸಿದರು. ಒಬ್ಬ ವಿಜ್ಞಾನಿಯೂ ಇದಕ್ಕೆ ಒಪ್ಪಿದ.

ವಿಜ್ಞಾನಿಯು ದೇವರಿಗೆ ಹೇಳಿದ, “ನೋಡು, ನಾವೆಲ್ಲ ವಿಜ್ಞಾನಿಗಳು ಸೇರಿ ಆಲೋಚನೆ ಮಾಡಿ ತೀರ್ಮಾನಿಸಿದ್ದೇವೆ. ಇನ್ನು ಮೇಲೆ ನೀನು ಬೇಕಿಲ್ಲ. ನಾವು ಹೊಸ ಹೊಸ ವಿಷಯಗಳನ್ನು ತಿಳಿದಿದ್ದೇವೆ. ಈಗಾಗಲೇ ಕುರಿಯನ್ನು ಕ್ಲೋನ್ ಮಾಡಿದ್ದೇವೆ, ಮನುಷ್ಯನನ್ನೂ ನಕಲು ಮಾಡುವವರಿದ್ದೇವೆ. ಆದ್ದರಿಂದ ನಿನಗೆ ಈಗಾಗಲೇ ಗೊತ್ತಾಗಿರಬೇಕು, ನಿನ್ನ ಅಗತ್ಯ ನಮಗಿಲ್ಲ.”

ದೇವರು ತಲೆದೂಗಿ ಹೇಳಿದ: “ಓಹೋ! ಬಹಳ ಒಳ್ಳೆಯದು. ನನಗೇನೂ ಬೇಸರವಿಲ್ಲ. ಆದರೆ ನೀನು ಮರಳುವ ಮುನ್ನ ಒಂದು ಸ್ಪರ್ಧೆ ಇಡೋಣ. ಏನೆನ್ನುವೆ?”

**ವಿಜ್ಞಾನಿ:** “ಖಂಡಿತಾ! ಎಂತಹ ಸ್ಪರ್ಧೆ?”

**ದೇವರು:** “ಮನುಷ್ಯನನ್ನು ತಯಾರಿಸುವ ಸ್ಪರ್ಧೆ.”

**ವಿಜ್ಞಾನಿ:** “ಅಷ್ಟೇ ತಾನೆ. ಏನೂ ಚಿಂತೆಯಿಲ್ಲ” ಎನ್ನುತ್ತ ಬಾಗಿ ನೆಲದ ಮೇಲಿಂದ ಸ್ವಲ್ಪ ಧೂಳನ್ನು ಎತ್ತಿಕೊಂಡ, “ನಾನೀಗ ರೆಡಿ” ಎಂದ.

**ದೇವರು:** “ಹಾಗಾಗಲು ಸಾಧ್ಯವಿಲ್ಲ. ನೀನು ನೀನೇ ತಯಾರಿಸಿದ ಧೂಳನ್ನು ತೆಗೆದುಕೊಂಡು ಬಾ!”

* * *

೯೫ ವರ್ಷಗಳ ಮುದುಕಿಯೊಬ್ಬಳು ಆಸ್ಪತ್ರೆಯಲ್ಲಿ ಇದ್ದಳು. ಅವಳನ್ನು ನೋಡಲು ಸ್ನೇಹಿತೆಯೊಬ್ಬಳು ಬಂದಳು. “ಹೇಗಿದ್ದೀರಾ?” ಎಂದು ಪ್ರಶ್ನಿಸಿದಳು.

**ಮುದುಕಿ:** “ಓಹ್! ಬಹಳ ಯೋಚನೆ ಆಗಿಬಿಟ್ಟದೆ!”

**ಗೆಳತಿ:** “ನಿಮಗೇನು ಯೋಚನೆ ಅಕ್ಕ? ಆರೋಗ್ಯವಾಗಿಯೇ ಕಾಣುತ್ತೀರಿ. ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಅಲ್ಲವೇ?”

**ಮುದುಕಿ:** “ಬಹಳ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾರೆ. ಅದಲ್ಲ ಸಮಸ್ಯೆ.”

**ಗೆಳತಿ:** “ಹಾಗಾದರೆ ನಿಮಗೇನಾದರೂ ನೋವಿದೆಯೇ?”

**ಮುದುಕಿ:** “ನನಗೆ ನೋವೆಂದರೆ ಏನು ಎಂಬುದೇ ತಿಳಿಯದು.”

**ಗೆಳತಿ:** “ಹಾಗಿದ್ದಲ್ಲಿ ಇನ್ನೇನು ಯೋಚನೆ?”

ಮುದುಕಿಯು ತನ್ನ ತೂಗುಕುರ್ಚಿಯಲ್ಲಿ ಹಿಂದೆ ಸರಿದು ಆರಾಮಾಗಿ ಕುಳಿತು ಹೇಳಿದಳು, “ನನಗಿದ್ದ ಬಹಳ ಹತ್ತಿರದ ಸ್ನೇಹಿತರೆಲ್ಲ ಈಗಾಗಲೇ ತೀರಿಕೊಂಡು ಸ್ವರ್ಗ ಸೇರಿದ್ದಾರೆ. ಅವರಿಗೆಲ್ಲ ಇವಳೆಲ್ಲಿ ಹೋದಳು ಎಂಬ ಚಿಂತೆ ಕಾಡುತ್ತಿರಬೇಕು.”

* * *

ಒಬ್ಬ ವ್ಯಕ್ತಿ ಸಭೆಯಲ್ಲಿ ಭಾಷಣ ಬಿಗಿಯುತ್ತಿದ್ದ. ಅದರಲ್ಲೇ ತಲ್ಲೀನನಾಗಿ ಎರಡು ತಾಸುಗಳ ಕಾಲ ಬಿಡದೆ ಮಾತನಾಡಿದ. ಕಡೆಗೆ ತಾನು ಮಾಡಿದ ತಪ್ಪಿನ ಅರಿವಾಗಿ ಹೇಳಿದ: “ದಯವಿಟ್ಟು ಕ್ಷಮಿಸಿ, ಮಿತಿಮೀರಿ ಮಾತನಾಡಿದೆ. ನನ್ನ ಗಡಿಯಾರವನ್ನು ಮನೆಯಲ್ಲೇ ಮರೆತುಬಿಟ್ಟದ್ದೇನೆ. ಅದಕ್ಕೇ ಹೀಗಾಯಿತು.” ಹಿಂಬದಿಯಿಂದ ಒಂದು ದನಿ ಕೇಳಿ ಬಂತು, “ಅಲ್ಲಾ ಸಾರ್! ನಿಮ್ಮ ಹಿಂದೆಯೇ ದೊಡ್ಡ ಕ್ಯಾಲೆಂಡರ್ ಇತ್ತಲ್ಲ!”